ಕರ್ನಾಟಕ ಸರ್ಕಾರ
(ಪಿ.ಆರ್.ಪಿ.67)

| |
|---|
| ಹೇಳಿಕೆ ಹಾಳೆ<br>(ಆರ್.ಪಿ.ಸಂಖ್ಯೆ 57)<br>ನಮೂನೆ ಸಂಖ್ಯೆ 4 |

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್ ನ್ಯಾಯಾಧೀಶರ ನ್ಯಾಯಾಲಯ, ಹಾಸನ**

**ಸ್ಪೆಷಲ್ ಕೇಸ್ ನಂಬರ್ : 520/2022**

**ಫ್ರಾಸಾ- 3 ಚಾಸಾ- 4**

| | | |
|---|---|---|
| ಸಾಕ್ಷಿದಾರರ ಹೆಸರುಃ | : | ಹರೀಶ್ ಕುಮಾರ್ |
| ತಂದೆಯ ಹೆಸರುಃ | : | ರಂಗಸ್ವಾಮಿ |
| ವಯಸ್ಸುಃ | : | 36 ವರ್ಷ |
| ಉದ್ಯೋಗಃ | : | ಪೇಯಿಂಟಿಂಗ್ ಕೆಲಸ |
| ವಾಸ | : | ಹಾಸನ |

**ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕ: 18-08-2025:**

**ಮುಖ್ಯ ವಿಚಾರಣೆಃ ಸರ್ಕಾರದ ಪರವಾಗಿ ಮಾನ್ಯ ವಿಶೇಷ ಅಭಿಯೋಜಕರಿಂದಃ**

ಆರೋಪಿತರು ನಮ್ಮೂರಿನವರು. ಪೊಲೀಸರು ನನ್ನನ್ನು ಅವರ ಜಮೀನಿನ ಬಳಿ ಕರೆದುಕೊಂಡು ಹೋಗಿ ಯಾವುದೇ ವಸ್ತುಗಳನ್ನು ವಶಪಡಿಸಿಕೊಂಡಿಲ್ಲ. ಅವರ ಜಮೀನಿನ ಬಳಿ ಕರೆದುಕೊಂಡು ಹೋಗಿ ಅಲ್ಲಿ ಆರೋಪಿತರು ಅಕ್ರಮವಾಗಿ ಬೆಳೆದಿದ್ದ ಗಾಂಜಾವನ್ನು ನನ್ನ ಸಮಕ್ಷಮ ವಶಪಡಿಸಿಕೊಂಡಿಲ್ಲ. ಈಗ ತೋರಿಸಿದ ನಿಪಿ-2ರಲ್ಲಿ ನನ್ನ ರುಜು ಇದೆ. ಸದರಿ ರುಜುವನ್ನು ನಿಪಿ-2(ಸಿ) ಎಂದು ಗುರುತಿಸಲಾಯಿತು. ಈಗ್ಗೆ ಒಂದೂವರೆ 2 ವರ್ಷಗಳ ಹಿಂದೆ ನಾನು ಮನೆ ಬಳಿ ಇದ್ದಾಗ ಪೊಲೀಸರು ನನ್ನ ಸಹಿ ಪಡೆದುಕೊಂಡರು. ಆರೋಪಿತರನ್ನು ದಸ್ತಗಿರಿ ಮಾಡಿಕೊಂಡು ಕರೆದುಕೊಂಡು ಹೋದರೆಂಬ ಬಗ್ಗೆ ನನ್ನ ಸಹಿ ಪಡೆದಿರುತ್ತಾರೆ. ಏತಕ್ಕೆ ದಸ್ತಗಿರಿ ಮಾಡಿಕೊಂಡು ಹೋದರೆಂದು ಗೊತ್ತಿಲ್ಲ. ನನ್ನ ಸಹಿ ಪಡೆದುಕೊಂಡ ದಾಖಲೆಯಲ್ಲಿ ಬರವಣಿಗೆ ಆಗಿತ್ತಾ ಎಂದು ನಾನು ಗಮನಿಸಲಿಲ್ಲ. ಪೊಲೀಸರು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ನನ್ನನ್ನು ವಿಚಾರಣೆ ಮಾಡಿ ಹೇಳಿಕೆ ಮಾಡಿಕೊಂಡಿಲ್ಲ.

2.ಈಗ ತೋರಿಸಿದ ಎಂ.ಒ.1ರಲ್ಲಿರುವ ಚೀಟಿಯ ಮೇಲೆ ನನ್ನ ಸಹಿ ಇದೆ ಎಂದರೆ ಸರಿ. ಸದರಿ ಸಹಿಯನ್ನು ನನ್ನ ಮನೆ ಬಳಿ ಪಡೆದುಕೊಂಡಿರುತ್ತಾರೆ. ಎಂ.ಒ.1ರ ಗಾಂಜಾವನ್ನು ನಾನು ಸಹಿ ಹಾಕುವ ಸಮಯದಲ್ಲಿ ನೋಡಿಲ್ಲ.

(ಈ ಹಂತದಲ್ಲಿ ಮಾನ್ಯ ವಿಶೇಷ ಅಭಿಯೋಜಕರು ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರುತ್ತಾರೆ, ಕಡತವನ್ನು ಪರಿಶೀಲಿಸಲಾಗಿ ಸಾಕ್ಷಿಯು ದಾಖಲೆಗೆ ವ್ಯತಿರಿಕ್ತವಾಗಿ ಸಾಕ್ಷ್ಯ ನುಡಿಯುವುದು ಕಂಡುಬರುತ್ತದೆ, ಆದ್ದರಿಂದ ಮಾನ್ಯ ವಿಶೇಷ ಅಭಿಯೋಜಕರ ಕೋರಿಕೆಯನ್ನು ಮನ್ನಿಸಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ, ಪಾಟೀಸವಾಲಿಗೆ ಒಳಪಡಿಸಲು ಅನುಮತಿ ನೀಡಲಾಗಿದೆ)

**ಪಾಟೀಸವಾಲುಃ ಸರ್ಕಾರದ ಪರ ಮಾನ್ಯ ವಿಶೇಷ ಅಭಿಯೋಜಕರಿಂದಃ**

ದಿನಾಂಕ 8-10-2021ರಂದು ಪೊಲೀಸರು ನನ್ನನ್ನು ಮತ್ತು ಚಾಸಾ-3 ರವರನ್ನು ಕರೆದು ಆರೋಪಿಯು ತನ್ನ ಮನೆ ಹತ್ತಿರ ಗಾಂಜಾ ಸೊಪ್ಪನ್ನು ಕತ್ತರಿಸಿ ಇಟ್ಟಿದ್ದಾನೆ, ಅದನ್ನು ವಶಪಡಿಸಿಕೊಳ್ಳಲು ಪಂಚರಾಗಿ ಬರಬೇಕು ಎಂದು ಕರೆದರು ಎಂದರೆ ಸರಿಯಲ್ಲ. ಆ ದಿವಸ ಮಧ್ಯಾಹ್ನ ಸುಮಾರು 1-30 ಗಂಟೆ ಸಮಯಕ್ಕೆ ಪೊಲೀಸರು ಆರೋಪಿತರ ಮನೆ ಬಳಿ ನಮ್ಮನ್ನು ಕರೆದುಕೊಂಡು ಹೋದರು ಎಂದರೆ ಸರಿಯಲ್ಲ. ಆರೋಪಿ ತನ್ನ ಮನೆಯ ಹತ್ತಿರದ ಖಾಲಿಜಾಗದಲ್ಲಿ ಕತ್ತರಿಸಿಟ್ಟಿದ್ದ ಗಾಂಜಾ ಸೊಪ್ಪನ್ನು ಹಾಜರುಪಡಿಸಿದರು ಎಂದರೆ ಸರಿಯಲ್ಲ. ಅದನ್ನು ಪೊಲೀಸರು ಎಲೆಕ್ಟ್ರಾನಿಕ್ ತೂಕ ಮಾಪನದಲ್ಲಿ ತೂಕ ಮಾಡಿದಾಗ ಅದರಲ್ಲಿ 3 ಕೆಜಿ 515ಗ್ರಾಂ ಗಾಂಜಾ ಸೊಪ್ಪು ಇರುವುದು ಕಂಡುಬಂತು ಎಂದರೆ ಸರಿಯಲ್ಲ. ಅದನ್ನು ಪೊಲೀಸರು ಬಿಳಿ ಬಟ್ಟೆಯಲ್ಲಿ ಹಾಕಿ ಹೊಲಿದು ಸೀಲು ಮಾಡಿ ನಮ್ಮ ಸಹಿ ಇರುವ ಚೀಟಿ ಅಂಟಿಸಿದರು ಮತ್ತು ವಶಪಡಿಸಿಕೊಂಡು ನಿಪಿ-2ರಂತೆ ಮಹಜರು ಮಾಡಿದರು ಅದಕ್ಕೆ ಅಲ್ಲಿಯೇ ನಾನು ಸಹಿ ಹಾಕಿದ್ದೇನೆ ಎಂದರೆ ಸರಿಯಲ್ಲ. ನಿಪಿ-2ಕ್ಕೆ ಸಹಿ ಮಾಡುವ ಸಮಯದಲ್ಲಿ ಪೊಲೀಸರು ಎಂ.ಒ.1ರ ಗಾಂಜಾವನ್ನು ವಶಪಡಿಸಿಕೊಂಡದ್ದು ಮತ್ತು ನನ್ನ ಸಹಿ ಪಡೆದುಕೊಂಡದ್ದೆಂದರೆ ಸರಿಯಲ್ಲ. ಈ ಎಲ್ಲ ವಿಚಾರವಾಗಿ ನಾನು ದಿನಾಂಕ 8-10-21ರಂದು

ಈಗ ಓದಿ ಹೇಳಿದಂತೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ಓದಿ ಹೇಳಿದ ಸದರಿ ಹೇಳಿಕೆಯನ್ನು ನಿಪಿ-6 ಎಂದು ಗುರುತಿಸಲಾಯಿತು. ಆರೋಪಿತರು ನಮ್ಮೂರಿನವರಾಗಿರುವುದರಿಂದ ಪೊಲೀಸರು ಅವನ ಮನೆಯ ಬಳಿ ಕತ್ತರಿಸಿದ ಗಾಂಜಾ ಸೊಪ್ಪನ್ನು ನನ್ನ ಸಮಕ್ಷಮ ವಶಪಡಿಸಿಕೊಂಡಿದ್ದರೂ ಸಹ ಆತನಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲುಃ ಆರೋಪಿ ಪರ ವಕೀಲರಿಂದಃ**

ಇಲ್ಲವೆಂದು ಹೇಳುತ್ತಾರೆ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್**

**ನ್ಯಾಯಾಧೀಶರು, ಹಾಸನ.**